ಆ) ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಕೈಮಗ್ಗ ಬಟ್ಟೆಗಳನ್ನು ಉಪಯೋಗಿಸದೆ ಇರುವುದರಿಂದ ಆ ಉದ್ಯೋಗದ ಮೇಲೆ ಹಾನಿಯಾಗುತ್ತಿರುವ ಸಂಗತಿ ನಿಜವೇ?

ಇ) ಕೈಮಗ್ಗದ ಅಧಿಕಾರಿಗಳ ಮತ್ತು ಶಿಕ್ಷಣ ಅಧಿಕಾರಿಗಳ ನಡುವೆ ಸಾಮರಸ್ಯ ಇಲ್ಲದೆ ಇರುವುದರಿಂದ ರಾಜ್ಯದ ಕೈಮಗ್ಗದ ಅರಿವೆಗಳು ಹಾಗೇ ಸಂಗ್ರಹವಾಗಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಕೂಡಲೇ ಶಿಕ್ಷಣ ಇಲಾಖೆಯವರು ಕೈಮಗ್ಗದ ಬಟ್ಟೆಗಳನ್ನು ಖರೀದಿಸಿ, ನೇಕಾರರಿಗೆ ಉದ್ಯೋಗಾವಕಾಶ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಬೇಕಾದ ಬಟ್ಟೆ ಅವಶ್ಯಕತೆಯನ್ನು ನೀಗಿಸಿಕೊಳ್ಳಲು ಕೈ ಮಗ್ಗ ಅಭಿವೃದ್ಧಿ ನಿಗಮವು ಕಳೆದ ಆರು ತಿಂಗಳ ಅವಧಿಯಲ್ಲಿ ಸುಮಾರು ರೂ. 23 ಕೋಟಿ ಮೌಲ್ಯದ ಬಟ್ಟೆ ಉತ್ಪಾದಿಸಿದೆ.

ಆ) ವಿದ್ಯಾ ವಿಕಾಸ ಯೋಜನೆಯಡಿ ಹೆಚ್ಚಿನ ಪಾಲಿನ ಸಮವಸ್ತ್ರ ಬಟ್ಟೆ ಸರಬರಾಜು ಮಾಡುವ ಹೊಣೆಯನ್ನು ಶಿಕ್ಷಣ ಇಲಾಖೆಯು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ವಹಿಸುವ ಮೂಲಕ ಕೈಮಗ್ಗದ ಬಟ್ಟೆಯನ್ನು ಉಪಯೋಗಿಸುತ್ತಿದೆ.

ಇ) ನಿಜವಲ್ಲ.

ಈ) ವಿದ್ಯಾ ವಿಕಾಸ ಯೋಜನೆಯಡಿ ಬರುವ ಶೈಕ್ಷಣಿಕ ವರ್ಷದ ಸಮವಸ್ತ್ರದ ಬಟ್ಟೆ ಅವಶ್ಯಕತೆಯಲ್ಲಿ ಹೆಚ್ಚಿನ ಪ್ರಮಾಣದ ಅವಶ್ಯಕತೆಗೆ ಬೇಡಿಕೆ ಪಟ್ಟಿಯನ್ನು ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಲು ಶಿಕ್ಷಣ ಇಲಾಖೆಯು ಕ್ರಮ ತೆಗೆದುಕೊಳ್ಳತ್ತಲಿದೆ.

ತಾಲ್ಲೂಕು ಸ್ಥಳಗಳಲ್ಲಿ ಶೆಡ್‌ಗಳನ್ನು ಕಟ್ಟುವುದು

1084 (1258) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕು ಸ್ಥಳಗಳಲ್ಲಿ ಚಿಕ್ಕ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಶೆಡ್‌ಗಳನ್ನು ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಆ) ಹಾಗಿದ್ದಲ್ಲಿ ಕಳೆದ 2 ವರ್ಷಗಳಲ್ಲಿ ತಾಲ್ಲೂಕು ಸ್ಥಳಗಳಲ್ಲಿ ಶೆಡ್‌ಗಳನ್ನು ಕಟ್ಟುವುದಾಗಲೀ ಅಥವಾ ಪ್ರೋತ್ಸಾಹ ಕೊಡಲಾಗಿದೆಯೇ: (ಜಿಲ್ಲಾವಾರು ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಇಂತಹ ಎಷ್ಟು ಶೆಡ್‌ಗಳನ್ನು ಕಟ್ಟಲಾಗಿದೆ? ಹಾಗೂ ಎಷ್ಟು ರಿಯಾಯಿತಿ ನೀಡಲಾಗಿದೆ? ಮತ್ತು ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆಯೇ? (ತಾಲ್ಲೂಕುವಾರು ವಿವರ ನೀಡುವುದು)

ಈ) ಬೆಳಗಾಂವ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹೊಸ ಚಿಕ್ಕ ಉದ್ಯಮಿಗಳು ಎಷ್ಟು ಬಂದಿರುವುವು? ಅವುಗಳಲ್ಲಿ ಎಷ್ಟು ಉದ್ಯಮಿಗಳು ನೊಂದಾಯಿಸಿದ ನಂತರ ಪ್ರಾರಂಭವಾಗಿರುವುವು?

ಶ್ರೀ ಎಸ್. ಆರ್ ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು)

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ನ)ವು ತಾಲ್ಲೂಕು ಸ್ಥಳಗಳಲ್ಲಿ ಚಿಕ್ಕ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಬೇಡಿಕೆಗೆ ಅನುಗುಣವಾಗಿ ಕೈಗಾರಿಕಾ ವಸಾಹತುಗಳಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡುತ್ತಿದೆ.

ಆ) ಕಳೆದ 2 ವರ್ಷಗಳಲ್ಲಿ ನಿಗಮವು ವಿವಿಧ ತಾಲ್ಲೂಕುಗಳಲ್ಲಿ 144 ಮಳಿಗೆಗಳನ್ನು ನಿರ್ಮಿಸಿದೆ. (ವಿವರ ಅನುಬಂಧದಲ್ಲಿ ನೀಡಿದೆ)

ಇ) 1998-99ನೇ ಸಾಲಿನಲ್ಲಿ ಬೆಳಗಾಂವ ತಾಲ್ಲೂಕಿನಲ್ಲಿ ಕಣಬರಗಿಯಲ್ಲಿ 4 ಮಳಿಗೆಗಳನ್ನು ನಿರ್ಮಿಸಲಾಗಿದೆ. ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಸರ್ಕಾರವು ಕಾಲಕಾಲಕ್ಕೆ ನೀಡುತ್ತಿದೆ.

ಈ) ಬೆಳಗಾಂವ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ 7297 ಸಣ್ಣ ಪ್ರಮಾಣದ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ಅವುಗಳಲ್ಲಿ 1568 ಸಣ್ಣ ಪ್ರಮಾಣದ ಕೈಗಾರಿಕೆಗಳು ಶಾಶ್ವತ ನೊಂದಣಿ ಪ್ರಮಾಣವು ಪಡೆದಿರುತ್ತಾರೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಮಳಿಗೆಗಳ ಸಂಖ್ಯೆ :
1	ಬೆಂಗಳೂರು (ಗ್ರಾಮಾಂತರ) Bangalore (Rural)	23
2	ಕೋಲಾರ Kolar	6
3	ತುಮಕೂರು Tumkur	6
4	ದಾವಣಗೆರೆ Davanagere	10
5	ಧಾರವಾಡ Dharwad	46
6	ಬೆಳಗಾಂ Belagum	4
7	ಬೀದರ್ Bidar	2

1	2	3
8	ಬಳ್ಳಾರಿ Bellary	2
9	ಮಂಡ್ಯ Mandya	18
10	ಹಾಸನ Hassan	19
11	ಶಿವಮೊಗ್ಗ Shimoga	4
12	ಉಡುಪಿ Udupi	4
	ಒಟ್ಟು **Total**	**144**

ಪುರಸಭೆಗಳಿಗೆ ಆರ್ಥಿಕ ಮುಗ್ಗಟ್ಟು

1085 (1261) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ಟ್ರಾಯ್ ತೆರಿಗೆಯನ್ನು ರದ್ದುಪಡಿಸಿದಾಗಿನಿಂದ ಪುರಸಭೆಗೆ ಆರ್ಥಿಕ ತೊಂದರೆ ಆಗುತ್ತಿರುವ ಸಂಗತಿ ನಿಜವೆ;

ಆ) ಆರ್ಥಿಕ ಮುಗ್ಗಟ್ಟಿನಿಂದಾಗಿ ಪಟ್ಟಣ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ನಗರಸಭೆಯವರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇಂತಹ ಪುರಸಭೆಗಳಿಗೆ ಸಚಿವರ ವಿವೇಚನಾ ನಿಧಿಯಿಂದ ಹಣ ಬಿಡುಗಡೆ ಮಾಡಲಾಗುವುದೆ;

ಇ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರ ಸಭೆಯ ವಿಸ್ತರಣಾ ಪ್ರದೇಶದಲ್ಲಿ ಹಾಗೂ ನಗರದ ಒಳಗೆಗಳಲ್ಲಿ ಗಟಾರ ಮಾಡಿ ಡಾಂಬರೀಕರಣ ಮಾಡದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಿ ಕುಡಿಯುವ ನೀರಿನ ಯೋಜನೆ ಕೈಗೊಳ್ಳಲು ಸಚಿವರ ವಿವೇಚನಾ ನಿಧಿಯಿಂದ ೫೦ ಲಕ್ಷ ರೂ. ಗಳನ್ನು ಮಂಜೂರು ಮಾಡಲು ಸರ್ಕಾರಿ ಕ್ರಮ ಕೈಗೊಳ್ಳುವುದೆ;